ಓ:ಎಸ್:ನಂ. *250/2015*

ಡಿ .ಡಬ್ಲ್ಯೂ- *3*

**ದಿನಾಂಕ: *10-04-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಪ್ರತಿವಾದಿ ಪರ ವಕೀಲರಿಂದ.**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

***ಪಾಟೀ ಸವಾಲು: ವಾದಿ ಪರ ವಕೀಲ*ರಿಂದ:**

ನಾನು ಹುಟ್ಟಿ ಬೆಳೆದಿದ್ದು ಹೆಬ್ಬೆ ಗ್ರಾಮದಲ್ಲಿ. ನಾನು ಎಂ ಸಿ ಹಳ್ಳಿ ಗ್ರಾಮಕ್ಕೆ ಬಂದು ಸುಮಾರು *23* ವರ್ಷಗಳಾಯಿತು. ಭದ್ರಮ್ಮ ನಮ್ಮ ಸಂಬಂಧಿಕರಲ್ಲ. ಭದ್ರಮ್ಮನಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು ಇದ್ದರು ಎಂದರೆ ಸರಿ. ಭದ್ರಮ್ಮನ ಹೆಸರಿನಲ್ಲಿ ಯಾವ ಯಾವ ಆಸ್ತಿ ಇತ್ತು ಎಂದರೆ ಸಾಕ್ಷಿ ಯಾವುದೇ ಆಸ್ತಿ ಇರಲಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಭದ್ರಮ್ಮನ ಮಗಳಾದ ಪುಟ್ಟಮ್ಮನವರನ್ನು ಉಂಬಳೆಬೈಲು ವಾಸಿಯಾದ ನಿಂಗಪ್ಪನವರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. ಹೆಬ್ಬೆ ಗ್ರಾಮಕ್ಕೂ ಉಂಬಳೆ ಬೈಲುಗೂ *25* ಕಿ ಮಿ ಅಂತರವಿದೆ. ಪಟ್ಟಮ್ಮನವರು *1972* ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ. ನಿಂಗಪ್ಪ ಯಾವ ವರ್ಷ ಮತ್ತು ದಿನಾಂಕದಂದು ಮರಣ ಹೊಂದಿರುತ್ತಾರೆಂದು ನನಗೆ ಗೊತ್ತಿಲ್ಲ. ಹೆಬ್ಬೆ ಗ್ರಾಮದಲ್ಲಿ ಭದ್ರಮ್ಮನಿಗೆ ಸೇರಿದ ಜಮೀನುಗಳು ಸರ್ಕಾರದವರು ಸ್ವಾಧೀನಪಡಿಸಿಕೊಂಡ ಬಗ್ಗೆ ಆಕೆಗೆ ಸರ್ಕಾರದಿಂದ *65* ಸಾವಿರ ಪರಿಹಾರದ ಹಣ ಮಂಜೂರಾಗಿದೆ ಎಂದು ಹೇಳಿದ್ದೀರಿ ನೀವು ನೋಡಿದ್ದೀರಾ ಎಂದರೆ ಸಾಕ್ಷಿಯು ಪರಿಹಾರದ ಹಣವನ್ನು ಚೆಕ್ ಮೂಲಕ ನೀಡಿರುತ್ತಾರೆ ಅದನ್ನು ನಾನು ನೋಡಿರುತ್ತೇನೆ. *1* ನೇ ವಾದಿಗೆ *5* ವರ್ಷ ಪ್ರತಿವಾದಿಗೆ *2* ವರ್ಷ ಆಗಿರಬಹುದು. ಪ್ರತಿವಾದಿಯು ಹೆಬ್ಬೆ ಗ್ರಾಮದಲ್ಲಿ ವಾಸವಾಗಿರುತ್ತಾನೆ. ಆನಂತರ ಪ್ರತಿವಾದಿಯು ಪ್ರಾಪ್ತ ವಯಸ್ಕನಾದ ನಂತರ ಮಂಗಳೂರಿಗೆ ಹೋಗಿ ವಾಸ ಮಾಡುತ್ತಿದ್ದ ಎಂದರೆ ಸರಿಯಲ್ಲ. ನಾನು *2001* ರಲ್ಲಿ ಎಂ ಸಿ ಹಳ್ಳಿಗೆ ಬಂದಿರುತ್ತೇನೆ. *1* ನೇ ವಾದಿಯು ಸಹ *2001* ರಲ್ಲಿ ಎಂಸಿ ಹಳ್ಳಿಗೆ ಬಂದು ವಾಸವಾಗಿರುತ್ತಾರೆಂದರೆ ಸರಿ. ಎಂ ಸಿ ಹಳ್ಳಿಯಲ್ಲಿ *1* ನೇ ವಾದಿಯು ವಾಸ ಮಾಡುವುದನ್ನು ಗಮನಿಸಿ ಸರ್ಕಾರದವರು ಮನೆ ಮತ್ತು ಜಮೀನನ್ನು ಮಂಜೂರು ಮಾಡಿದ್ದಾರೆಂದರೆ ಸರಿ.

ಅದೇ ರೀತಿ ಪ್ರತಿವಾದಿಗೂ ಮನೆ ಕೊಟ್ಟಿದ್ದಾರೆಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿಯಿಂದ ಮಂಜೂರಾಗಿದೆ ಎಂದು ನುಡಿಯುತ್ತಾರೆ. *1* ನೇ ವಾದಿಗೆ ಮನೆ ಮಂಜೂರಾದ *7-8* ವರ್ಷದ ನಂತರ ಪ್ರತಿವಾದಿಗೆ ಗ್ರಾಮ ಪಂಚಾಯಿತಿಯಿಂದ ಮನೆ ಮಂಜೂರು ಮಾಡಿದ್ದಾರೆ. ಪ್ರತಿವಾದಿಯು ಎಂಸಿ ಹಳ್ಳಿಯಲ್ಲಿ ಆತನ ದೊಡ್ಡಪ್ಪ ಮತ್ತು ಚಿಕ್ಕಪ್ಪನ ಮನೆಯಲ್ಲಿ ವಾಸವಾಗಿದ್ದರು. ಪ್ರತಿವಾದಿಯು ಆತನ ದೊಡ್ಡಪ್ಪ ಮತ್ತು ಚಿಕ್ಕಪ್ಪನ ಮನೆಯಲ್ಲಿ ವಾಸವಾಗಿದ್ದರು ಎಂಬುದಕ್ಕೆ ನಾನು ದಾಖಲೆಯನ್ನು ನೋಡಿರುವುದಿಲ್ಲ. *2001* ನೇ ಸಾಲಿನಲ್ಲಿ ವಾದಿ ಹೆಸರಿಗೆ ಮನೆ ಮತ್ತು ಜಮೀನನ್ನು ಮಂಜೂರು ಮಾಡಿ ಸರ್ಕಾರದವರು ಸದರಿ ಮನೆ ಮತ್ತು ಜಮೀನನ್ನು ಆತನ ಹೆಸರಿಗೆ ಮಂಜೂರು ಮಾಡಿದ್ದಾರೆಂದರೆ ಸರಿಯಲ್ಲ. ಭದ್ರಮ್ಮನ ಹೆಸರಿಗೆ ಜಮೀನುಗಳು ಮಂಜೂರಾದ ಬಗ್ಗೆ ನಾನು ದಾಖಲಾತಿಗಳನ್ನು ನೋಡಿರುತ್ತೇನೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ವಾದಿ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಸೇರಿದವನಲ್ಲ ಎಂದರೆ ಸರಿ. ಭದ್ರಮ್ಮನವರ ಹೆಸರಿನಲ್ಲಿ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಈ ದಾವೆಯ ಸಂಗತಿಗಳು ನನಗೆ ಗೊತ್ತಿಲ್ಲದಿದ್ದರೂ ಸಹ ನಾನು ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***